ಶೂ ಹಾಕಿಕೊಳ್ಳತೊಡಗಿದ. “ಬ್ರೇಕ್‌ಫಾಸ್ಟನ್ನು ಸ್ಕಿಪ್ ಮಾಡಬೇಡ ಪುಟ್ಟಾ” ಅಂದೆ. ಮೊದಲನೆಯ ದೋಸೆ ಏಳುವ ಮೊದಲೇ ಧಡಾರನೆ ಬಾಗಿಲು ಬಡಿದು ಅವನು ಹೊರಟಾಗಿತ್ತು.

“ಟೀನೇಜಿನಲ್ಲಿ ಇವೆಲ್ಲ ಮಾಮೂಲು ಅಲ್ಲವೇ? ಐಮ್ ಶ್ಯೂರ್ ಯೂ ಹ್ಯಾವ್ ಡನ್ ಇಟ್.” ಮೋಹಕವಾದ ತುಂಟ ನಗೆ ನಗುತ್ತ ಉಸುರುತ್ತಾನೆ ಟೋರಿ. ಈ ಟೋರಿ ನನ್ನ ಸ್ನೇಹಿತ. ಸ್ನೇಹಿತ ಅಂದರೆ ಅದಕ್ಕಿಂತ ಸ್ವಲ್ಪ ಜಾಸ್ತಿಯೇ. ನಾನು ಕೆಲಸ ಮಾಡುವ ಅಂಗಡಿಯ ಪಕ್ಕದ ಹೋಟೆಲಿನಲ್ಲಿ ಮ್ಯಾನೇಜರ್ ಅವನು. ನಾವು ಸೇಲ್ಸ್‌ನ ಸಿಬ್ಬಂದಿಗಳೆಲ್ಲ ಹೊಸವರ್ಷದ ಆಚರಣೆಗೆಂದು ಆ ಹೋಟೆಲಿಗೆ ಹೋದಾಗ ಅವನ ಪರಿಚಯವಾಗಿತ್ತು. ಆ ಪರಿಚಯ ಮೊದಲ ಕಣ್ನೋಟದಲ್ಲಿ ಕುಡಿಯೊಡೆದು, ಇನ್ನೆಲ್ಲೋ ಸಿಕ್ಕಿದಾಗ ಮುಗುಳ್ನಗೆಯಲ್ಲಿ ಮುಂದುವರೆದು, ಒಟ್ಟಿಗೆ ಕಾಫಿ ಕುಡಿಯುವಾಗ ಹತೋಟಿ ತಪ್ಪಿ ಕೈ ಬೆಸೆದು, ಅದು ಅದು ಮುಂದೆ ಮುಂದೆ ಬಂದು ಈಗ ನಲವತ್ತರ ಅಂಚಿನಲ್ಲಿರುವ ನಾವಿಬ್ಬರೂ ಆಗಾಗ ಅವನ ಅಪಾರ್ಟ್‌ಮೆಂಟಿನ ಮುಚ್ಚಿದ ಕರ್ಟನ್ನುಗಳ ಅರೆ ಬೆಳಕಿನಲ್ಲಿ ಹುಚ್ಚೆದ್ದು ಮುದ್ದಾಡುವವರೆಗೂ ಬಂದು ನಿಂತಿದೆ.

ನಾನು ಟೋರಿಯನ್ನೆಂದೂ ಮನೆಗೆ ಕರೆದಿಲ್ಲ. ಹಾಗೆ ಮಾಡುವ ಹಂತಕ್ಕೆ ಹೋದಾಗಲೆಲ್ಲ ನನ್ನ ಒಳಗಿನಿಂದ, ಅತೀ ಆಳದಿಂದ ಬಂದ ಏನೋ ಒಂದು ಅಳುಕು ನನ್ನನ್ನು ತಡೆದಿದೆ. ಕಾಯಲು ಸುತ್ತ ಯಾರೂ ಇರದಾಗಲೂ ಕಾಡುವ ಭಯ ಅದು. ಆದರೆ, ಮನಸ್ಸಿಗೆ ವಿಧಿಸಿಕೊಂಡ ಕಟ್ಟುಪಾಡುಗಳನ್ನು ದೇಹಕ್ಕೆ ಹೇಗೆ ವಿಧಿಸುವುದು? ಗೊತ್ತಿದ್ದವರೇ ಹೇಳಬೇಕು.

ಟೋರಿ ಇಂಥ ಯಾವ ಭಾರಗಳನ್ನು ಹೊತ್ತಿಲ್ಲದರಿಂದ ಇನ್ನಷ್ಟು ಆಕರ್ಷಕವಾಗಿದ್ದಾನೆ. ಅವನ ಎತ್ತರದ ನಿಲುವಿಗೆ, ಇಂಗ್ಲಿಷಿನ ವಿಶಿಷ್ಟ ಉಚ್ಚಾರಣೆಗೆ, ನಾನಾಗಿಯೇ ಹೇಳದೇ ನನ್ನ ಯಾವ ವೈಯಕ್ತಿಕ ವಿಚಾರಕ್ಕೂ ತಲೆ ಹಾಕದ ಗುಣಕ್ಕೆ ಸೋತಿದ್ದೇನೆ. ಅವನಿಗೂ ನನ್ನ ಕುರಿತು ಅಂಥದೇ ಅಭಿಪ್ರಾಯವಿದ್ದಿರಬಹುದು. ನನ್ನ ಹತ್ತಿರ ಕನ್ನಡ ಮಾತಾಡಿಸಿ, “ನಿಮ್ಮ ಭಾಷೆ ಸಂಗೀತದ ಹಾಗಿದೆ” ಎನ್ನುತ್ತಾನೆ. ಬಾಧ್ಯತೆಯಿಲ್ಲದ ಸಂಬಂಧದ ಈ ಹಗುರಕ್ಕೆ ಮಾರು ಹೋಗಿದ್ದೇನೆ.

ಅವನ ಹಾಸಿಗೆಯ ಪಕ್ಕ ನೈಟ್‌ಸ್ಟಾಂಡಿನ ಮೇಲೆ ಒಬ್ಬ ಹೆಂಗಸು ಮಗುವೊಂದನ್ನು ಎತ್ತಿಕೊಂಡು ನಿಂತ ಕಟ್ಟು ಹಾಕಿಸಿದ ಛಾಯಾಪಟವೊಂದಿದೆ. ಮಾಕೋ ಕೂಡ ಚಿಕ್ಕವನಿರುವಾಗ ಅಂಥದೇ ಬಣ್ಣದ ಅಂಗಿಯನ್ನು ತೊಡುತ್ತಿದ್ದನಲ್ಲವೇ ಎಂದು ಗಮನಿಸಿ ತುಸು ಅಧೀರಳಾಗುತ್ತೇನೆ.

★★★

ಮಾಕೋನ ಪೂರ್ತಿ ಹೆಸರು ಮಲ್ಲಿಕಾರ್ಜುನ ಎನ್ನುವುದು ನನಗೆ ಮರೆತೇ ಹೋಗಿರುವಷ್ಟು ಹಳೆಯ ವಿಷಯ. ಪಾಸ್‌ಪೋರ್ಟು, ಮಾರ್ಕ್ಸ್‌ಕಾರ್ಡುಗಳಂಥ ದಾಖಲೆಗಳಲ್ಲಿ ಆ ದೀರ್ಘ ಹೆಸರನ್ನು ಕಂಡಾಗ ಆ ಆಗಂತುಕ ನಾಮಧೇಯಕ್ಕೂ ಮಾಕೋನ ವ್ಯಕ್ತಿತ್ವಕ್ಕೂ ಸಂಬಂಧವೇ ಇಲ್ಲ ಅನ್ನಿಸಿದ್ದಿದೆ. ನಮ್ಮ ಮಾವ ತೀರಿ ಹೋಗಿ ವರ್ಷದೊಳಗೆ ಅವನು ಹುಟ್ಟಿದ್ದರಿಂದ ಅತ್ತೆ ಹಟದಿಂದ ಅಜ್ಜನ ಹೆಸರನ್ನೇ ಮೊಮ್ಮಗನಿಗೆ ಇಡಬೇಕೆಂದು ತಾಕೀತು ಮಾಡಿದ್ದರು. ನನಗೆ ಆ ಹೆಸರು ಒಂಚೂರೂ ಇಷ್ಟವಿರಲಿಲ್ಲ. ನನಗೆ ಅವನನ್ನು ‘ರೋಹನ್’ ಎಂದು ಕರೆಯುವ ಮನಸ್ಸಿತ್ತು. ಆಮೇಲೆ ಅತ್ತೆಯವರು ಅದೊಂದು ಹೆಸರಿನ ದೆಸೆಯಿಂದ ಹಿಂದಿನ ಯಾವುದಾವುದೋ ಋಣವನ್ನು ನೆನಪಿಸಿದಾಗ ಸುಹಾಸನೇ, “ಇರಲಿ ಬಿಡಲಾ, ಅಪ್ಪನ ಹೆಸರನ್ನ ಇಡೂಣಂತ. ನಾವೀಗ ಏನಂತ ಇಟ್ಟರೂ, ಅವ ಹದಿನೆಂಟು ದಾಟಿದ ಮ್ಯಾಲೆ ರಿಕ್ ಡಿಕ್‌ಹೆಡ್ ಅಂತ ಹೆಸರು ಬದಲಿ ಮಾಡಿಕೊಳ್ಳಂಗಿಲ್ಲ ಅಂತ ಏನು ಗ್ಯಾರೆಂಟಿ?” ಅಂತ ವಿಷಯವ ತಿಳಿಗೊಳಿಸಲು ನೋಡಿದ್ದ.

ಇನ್ನೇನು ವರ್ಷದೊಳಗೆ ಹದಿನೆಂಟು ತುಂಬುತ್ತದೆ ಮಾಕೋನಿಗೆ. ಆ ಜೋಕು ಹಾರಿಸಿ ನನ್ನನ್ನು ಬರಸೆಳೆದು ಮುತ್ತಿಟ್ಟ ಸುಹಾಸ ಈಗ ಎಲ್ಲಿದ್ದಾನೋ. ಇರಬಹುದು ಟೆಕ್ಸಾಸ್‌ನಲ್ಲೋ,